1	2	3
16.	ಕೊಡಗು	32
17.	ದಕ್ಷಿಣ ಕನ್ನಡ ಜಿಲ್ಲೆ	110
18.	ಉಡುಪಿ	95
19.	ಬೆಳಗಾಂ	144
20.	ಚಿಕ್ಕೋಡಿ	08
21.	ಬಿಜಾಪುರ	81
22.	ಬಾಗಲಕೋಟೆ	95
23.	ಧಾರವಾಡ	53
24.	ಹಾವೇರಿ	58
25.	ಗದಗ್	75
26	ಉತ್ತರ ಕನ್ನಡ	81
27.	ಗುಲ್ಬರ್ಗಾ	228
28.	ಯಾದಗಿರಿ	07
29.	ಬಳ್ಳಾರಿ	111
30.	ರಾಯಚೂರು	105
31.	ಕೊಪ್ಪಳ	98
32.	ಬೀದರ್	115
	ಒಟ್ಟು	**3017**

75(153) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು, ನ್ಯಾಯ ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳೆಷ್ಟು

ಆ) ಯಾವ ನ್ಯಾಯಾಲಯಗಳಲ್ಲಿ ಯಾವ ಹಂತದಲ್ಲಿ ಮೊಕದಮ್ಮೆಗಳು ಬಾಕಿ ಉಳಿದಿವೆ:

ಇ) ರಾಜ್ಯದಲ್ಲಿ ಎಷ್ಟು ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಕೊರತೆ ಇದೆ:

ಈ) ಕೊರತೆ ಇರುವಂತಹ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ:

ಉ) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮ್ಮೆಗಳೆಷ್ಟು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು, ನ್ಯಾಯ ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) 10,55,278 (1–2–2006ರಂದು)

ಆ) ರಾಜ್ಯದಲ್ಲಿರುವ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು, ಸಿವಿಲ್ ನ್ಯಾಯಾಲಯಗಳ (ಹಿರಿಯ ವಿಭಾಗ) ಮತ್ತು ಸಿವಿಲ್ ನ್ಯಾಯಾಲಯಗಳು (ಕಿರಿಯ ವಿಭಾಗ) ಇಲ್ಲಿ ಬಾಕಿ ಇದ್ದು, ನೋಟೀಸ್ ಜಾರಿ, ವಾಗ್ವಾದ ಹಾಗೂ ಸಾಕ್ಷಿ ಹಂತದಲ್ಲಿವೆ.

ಇ) 63

ಈ) ಜಿಲ್ಲಾ ನ್ಯಾಯಾಧೀಶರ ವೃಂದದಲ್ಲಿನ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಉಚ್ಚ ನ್ಯಾಯಾಲಯ ಕ್ರಮ ಕೈಗೊಳ್ಳುತ್ತಿದೆ. ಇತರೆ ನ್ಯಾಯಾಂಗ ಅಧಿಕಾರಿಗಳ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಉ) 85911

76 (154) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶದ ರಸ್ತೆಗಳು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅವುಗಳ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು?

ಈ) ಯಾವ ಯಾವ ಕ್ಷೇತ್ರಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗಿದೆ? (ವಿಧಾನ ಕ್ಷೇತವಾರು ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಪ್ರಸ್ತುತ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಸರ್ಕಾರವು ರೂ.80.12 ಕೋಟಿ ಅನುದಾನ ಒದಗಿಸಿದೆ.

ಇ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಸರ್ಕಾರವು ರೂ. 332.75 ಕೋಟಿಗಳನ್ನು ಖರ್ಚುಮಾಡಿದೆ.

ಈ) ಕ್ಷೇತ್ರವಾರು ವೆಚ್ಚದ ವಿವರವನ್ನು ಅನುಬಂಧ–1ರಲ್ಲಿ ನೀಡಿದೆ.